**ಇಂದು ದಿನಾಂಕ: 28.08.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಮುಂದುವರಿದ ಪಾಟೀ ಸವಾಲು : ವಾದಿ ಪರ ಶ್ರೀ. ವಕೀಲರಿಂದಃ**

ದಾವಾ ಐಟಂ ನಂಬರ್ 1 ರ ಆಸ್ತಿ ಈಗ ನನ್ನ, ನನ್ನ ತಾಯಿ ಮತ್ತು ಮೃತ ನನ್ನ ತಮ್ಮ ಸತೀಶರವರ ಜಂಟಿ ಹೆಸರಿನಲ್ಲಿ ನಮ್ಮ ತಂದೆ ಪೌತಿಯಾದ ನಂತರ ಬಂದಿದೆ ಎಂದರೆ ಸರಿ. ಪೌತಿ ಖಾತೆ ಮಾಡಿಸಿಕೊಳ್ಳಲು ನನ್ನ ತಾಯಿ ಅರ್ಜಿ ಕೊಟ್ಟಿದ್ದರು. ವಾದಿ ಹೆಸರನ್ನು ಕೈ ಬಿಟ್ಟು ಸುಳ್ಳು ವಂಶವೃಕ್ಷ ಸೃಷ್ಟಿಸಿ ಖಾತೆ ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ, ವಾದಿ ಈಗಾಗಲೇ ಹಣ ಪಡೆದುಕೊಂಡಿದ್ದಾರೆ. ವಾದಿ ಹಣ ಪಡೆದುಕೊಂಡಿರುವ ಬಗ್ಗೆ ದಾಖಲೆ ಮಾಡಿಕೊಂಡಿದ್ದಾರೆ. ಆ ದಾಖಲೆ ಬೇರೆ ಕಡೆ ಇದೆ ಅದನ್ನು ಪಡೆದುಕೊಂಡು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ. ವಾದಿ ಯಾವುದೇ ದಾಖಲೆ ಮಾಡಿಕೊಟ್ಟಿಲ್ಲದಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಐಟಂ ನಂಬರ್ 3 ರ ಆಸ್ತಿ ನನ್ನ ತಂದೆಯ ಹೆಸರಿನಲ್ಲಿ ಖಾತೆ ಇತ್ತು ಎಂದರೆ ಸರಿಯಲ್ಲ. ಇತರೆ ವಾರಸುದಾರರನ್ನು ಹೊರತುಪಡಿಸಿ ಅನ್ಯತಾ ಪಾಯಿದೆ ಹೊಂದಲು ನಾನೊಬ್ಬನೆ ಮೊದಲು ಖಾತೆ ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ದಾವಾ ಐಟ ನಂಬರ್ 3 ರ ಆಸ್ತಿಗೆ ಸಂಬಂಧಿಸಿದಂತೆ ನನ್ನ ಹೆಸರಿಗೆ ಖಾತೆ ಮಾಡಿಸುವಂತೆ ನನ್ನ ತಾಯಿ ಅರ್ಜಿ ಕೊಟ್ಟಿದ್ದರು. ನನ್ನ ತಾಯಿ ಅರ್ಜಿ ಕೊಟ್ಟಿದ್ದ ಬಗ್ಗೆ ದಾಖಲೆ ಇದೆಯೇ ಎಂದರೆ ಮನೆಯಲ್ಲಿ ನೋಡಿ ತರುತ್ತೇನೆ. ಅಸಲು ದಾವಾ ನಂಬರ್ 59/2021 ರಲ್ಲಿ ವಕೀಲರನ್ನು ನೇಮಿಸಿಕೊಂಡಿದ್ದೀರಾ ಎಂದರೆ ಅದರಲ್ಲಿ ನನಗೆ ನೋಟೀಸು ಬಂದಿಲ್ಲ. ದಾವಾ ಐಟಂ ನಂಬರ್ 2 ರ ಆಸ್ತಿಗಾಗಿ ಮಾತ್ರ ಅಸಲು ದಾವಾ ನಂಬರ್ 59/2021 ರಲ್ಲಿ ದಾವೆ ಸಲ್ಲಿಸಿದ್ದರು ಎಂದರೆ ಗೊತ್ತಿಲ್ಲ. ಅಸಲು ದಾವಾ ನಂಬರ್ 59/2021 ದಾವೆ ಸಲ್ಲಿಸುವ ಪೂರ್ವದಲ್ಲಿ ನಾವೆಲ್ಲರೂ ಒಟ್ಟಾಗಿ ರಾಜಿ ಮಾಡಿಕೊಂಡು ಈ ಕೇಸಿನ ದಾವಾ ಐಟಂ ನಂಬರ್ 2 ರ

ಆಸ್ತಿ 1 ನೇ ಪ್ರತಿವಾದಿಗೆ ಬಂದಿತ್ತು ಎಂದರೆ ಸರಿಯಲ್ಲ. ಆ ರೀತಿ ರಾಜಿ ಮಾಡಿಕೊಳ್ಳುವ ಕಾಲಕ್ಕೆ 1 ನೇ ಪ್ರತಿವಾದಿಗೆ ಎಲ್ಲ ಮಕ್ಕಳಿಗೂ ಸಮನಾಗಿ ಆಸ್ತಿ ಕೊಡುವಂತೆ ನನ್ನ ಮಾವ ನನ್ನ ತಾಯಿಗೆ ಹೇಳಿದ್ದರು ಎಂದರೆ ಸುಳ್ಳು. ನಾವಿಬ್ಬರೂ ಸೇರಿ ಆಸ್ತಿ ಕೊಡವುದಿಲ್ಲ ಎಂದು ಹೇಳಿದ ಕಾರಣಕ್ಕೆ ಕುಶಾಲನಗರ ನ್ಯಾಯಾಲಯದಲ್ಲಿ ದಾವೆ ಹೂಡಿದ್ದರು ಎಂದರೆ ಸುಳ್ಳು. ದಾವೆ ಹೂಡಿದ ನಂತರ ನಾವೆಲ್ಲರೂ ರಾಜಿ ಮಾಡಿಕೊಂಡು ದಾವೆ ವಾಪಸ್ಸು ತೆಗೆದುಕೊಂಡ ನಂತರ ಮಾತಾಡೋಣ ಎಂದು ಹೇಳಿದ್ದರು ಎಂದರೆ ಸುಳ್ಳು. ಆ ಕಾರಣದಿಂದ ವಾದಿ ಆ ದಾವೆಯನ್ನು ವಾಪಸ್ಸು ತೆಗೆದುಕೊಂಡಿದ್ದಾರೆ ಎಂದರೆ ಸುಳ್ಳು. ನಾನು ನನ್ನ ತಾಯಿ ಸೇರಿ ದಾವಾ ಐಟಂ ನಂಬರ್ 2 ರ ಆಸ್ತಿಯನ್ನು ರೂಪ ಎಂಬುವರಿಗೆ 8 ಸೆಂಟ್ ಮಾರಾಟ ಮಾಡಿದ್ದೇವೆ ಎಂದರೆ ಸರಿಯಲ್ಲ. ಮಾರಾಟ ಮಾಡಿ ಬಂದ ಹಣದಲ್ಲಿ ನನ್ನ ಬ್ಯಾಂಕ್ ಖಾತೆಗೆ ಸ್ವಲ್ಪ ಹಣವನ್ನು ನನ್ನ ತಾಯಿ ಹಾಕಿದ್ದಾರೆ ಎಂದರೆ ಸುಳ್ಳು. ಆಸ್ತಿಯ ಬೆಲೆ ಹೆಚ್ಚಾದ ಕಾರಣ ನನ್ನ ತಾಯಿಗೆ ಇಲ್ಲದ ಸಲ್ಲದ ಕಾರಣ ಹೇಳಿ ವಾದಿಯನ್ನು ದೂರ ಮಾಡಲು ಪ್ರಯತ್ನಪಟ್ಟಿದ್ದೇನೆ ಎಂದರೆ ಸುಳ್ಳು. ಈ ನ್ಯಾಯಾಲಯದಲ್ಲಿ ಕೇಸು ಹಾಕಿದ್ದಾಗ ಹೃದಯ ಸಂಬಂಧಿ ಕಾಯಿಲೆಯಿಂದ ವಾದಿ ಆಸ್ಪತ್ರೆ ಸೇರಿದ್ದರು ಎಂದರೆ ಸರಿಯಲ್ಲ. ಅದಾದ ನಂತರ ಆಸ್ತಿಗಳ ಬೆಲೆ ಹೆಚ್ಚಾದ ಕಾರಣ ಈ ದಾವೆ ಹಾಕಿದ್ದಾರೆ ಎಂದರೆ ಸುಳ್ಳು.

**ಪಾಟೀ ಸವಾಲು ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

***ಓ.ಹೆ.ಕೆ.ಸರಿ ಇದೆ.***

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ**